**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ.** ಸಿ.ಡಬ್ಲು–೧೧

3613/2023 ಪಿ.ಡಬ್ಲು–೦೭

| | | |
|---|---|---|
| ಹೆಸರು | ಃ | ಡಾಃ ಸುನೀಲ |
| ತಂದೆಃಗಂಡ | ಃ | ಸೂರ್ಯಕಾಂತ |
| ವಯಸ್ಸು | ಃ | ೩೭ ವರ್ಷ |
| ಉದ್ಯೋಗ | ಃ | ವೈದ್ಯಾಧಿಕಾರಿಗಳು ಸರ್ಕಾರಿ ಆಸ್ಪತ್ರೆ ಆಳಂದ |
| ವಾಸಸ್ಥಳ | ಃ | ಆಳಂದ |

ದಿನಾಂಕಃ

02.08.2025

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ದಿಃ 28-03-2023 ರಂದು ಚಾಸಾ 1, 4 ರಿಂದ 6, ನಾನು ಚಾಸಾ 5 ರವರನ್ನು ಸುಮಾರು 4.00 ಗಂಟೆಗೆ ಪರಿಕ್ಷೀಸಿದ್ದು ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಯಾವುದೇ ಹೊರಗಾಯಗಳು ಕಂಡು ಬಂದಿರುವುದಿಲ್ಲ. ಅದೇ ದಿನ ಚಾಸಾ 1 ರವರನ್ನು 4.10 ಗಂಟೆಗೆ ಪರಿಕ್ಷಿಸಿ ನೋಡಿದಾಗ ಅವರಿಗೂ ಸಹ ಯಾವುದೇ ಹೊರಗಾಯಗಳು ಕಂಡು ಬಂದಿರುವುದಿಲ್ಲ. ಅದೇ ದಿನ ಚಾಸಾ 4 ರವರನ್ನು 4.12 ಗಂಟೆಗೆ ಪರೀಕ್ಷಿಸಿ ನೋಡಿದಾಗ ಅವರ ಮೇಲ್ತುಟಿಯ ಒಳಭಾಗದಲ್ಲಿ 1*1 ಸೇ.ಮಿ ತೆರೆಚಿದ ಗಾಯ ಕಂಡು ಬಂದಿತ್ತು. ಅದೇ ದಿನ ಚಾಸಾ 6 ರವರನ್ನು 4.15 ಗಂಟೆಗೆ ಪರೀಕ್ಷಿಸಿ ನೋಡಿದಾಗ ಅವರಿಗೆ ಯಾವುದೇ ತರಹದ ಹೊರಗಾಯಗಳು ಕಂಡು ಬಂದಿರುವುದಿಲ್ಲ. ಈ ರೀತಿ ನಾನು ಸದರಿ ಅವರಿಗೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ಗಾಯದ ಪ್ರಮಾಣ

ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. 3 ರಿಂದ ನಿಪಿ. 6 ಅಂತಾ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 3 ಎ ರಿಂದ ನಿಪಿ. 6 ಎ ಅಂತಾ ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಸಿ ವಕೀಲರರಿಂದ.</u>**

ಯಾರಾದರು ಹಲ್ಲೆಯ ಹಿನ್ನಲೆಯ ಮೇಲೆ ಆಸ್ಪತ್ರೆಗೆ ಚಿಕಿತ್ಸೆ ತೆಗೆದುಕೊಳ್ಳಲು ಬಂದಾಗ ಪೋಲಿಸರಿಗೆ ತಿಳಿಸಬೇಕಾಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಪೋಲಿಸರಿಗೆ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಕರಣದ ಬಗ್ಗೆ ನಮ್ಮ ರಜಿಸ್ಟ್ರರನಲ್ಲಿ ನಮೂದು ಮಾಡಿ ಸಂಖ್ಯೆ ನೀಡುತ್ತೇವೆ ಎಂದರೆ ಸರಿ. ನಿಪಿ. 3 ರಿಂದ 6 ರಲ್ಲಿ ಎಮ.ಎಲ್.ಸಿ ಸಂಖ್ಯೆ ನಮೂದು ಮಾಡಿಲ್ಲ ಅಂದರೆ ಸಾಕ್ಷಿಯು ನಮ್ಮ ರಿಜಿಸ್ಟರನಲ್ಲಿ ನಮೂದು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಗಾಯಾಳುಗಳನ್ನು ಪರೀಕ್ಷಿಸಿದಾಗ ಅವರ ಗುರುತಿನ ಚಿಹ್ನೆಯನ್ನು ನಮೂದು ಮಾಡುತ್ತೇವೆ ಎಂದರೆ ಸರಿ. ಗುರುತಿನ ಚಿಹ್ನೆಯನ್ನು ನಮೂದು ಮಾಡದ ಪಕ್ಷದಲ್ಲಿ ವ್ಯಕ್ತಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ರಜಿಸ್ಟರನಲ್ಲಿ ಸದರಿ ವ್ಯಕ್ತಿಗಳ ಎಡಗೈ ಹೆಬ್ಬೆಟ್ಟಿನ ಗುರುತನ್ನು ತೆಗೆದುಕೊಳ್ಳತ್ತೇವೆ ಎಂದು ನುಡಿಯುತ್ತಾರೆ. ನಾನು ಸದರಿ ರಜಿಸ್ಟ್ರರನ್ನು ನಿಪಿ. 3 ರಿಂದ 6 ರ ಜೊತೆಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿಗೆ ಎರಡು ಗುರುತಿನ ಚಿಹ್ನೆಗಳನ್ನು ಪಡೆಯಬೇಕಾತ್ತದೆ ಎಂದರೆ ಸರಿ. ನಿಪಿ. 3 ರಿಂದ 6 ರಲ್ಲಿ ನಾನು ಗುರುತಿನ ಚಿಹ್ನೆಗಳನ್ನು ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ 1, 5 ಮತ್ತು 6 ರವರ ಗಾಯದ ಪ್ರಮಾಣ ಪತ್ರದಲ್ಲಿ ಅವರಿಗೆ ಯಾವುದೇ ಹೊರಗಾಯಗಳು ಆಗಿರುವುದಿಲ್ಲ ಅಂತಾ ನಮೂದು ಮಾಡಿರುತ್ತೇನೆ ಎಂದರೆ ಸರಿ. ಚಾಸಾ 4 ರವರು ಅವರು ತಮ್ಮ ಸಾಕ್ಷಿಯಲ್ಲಿ ಅವರಿಗೆ ಮೇಲ್ತುಟಿಯ ಒಳಭಾಗದಲ್ಲಿ 1*1 ಸೇ.ಮಿ ತೆರೆಚಿದ ಗಾಯ ಆಗಿತ್ತು ಅಂತಾ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಪರಿಕ್ಷಿಸಿದಾಗ ಕಂಡು ಬಂದಿರುತ್ತದೆ ಅಂತಾ ನುಡಿಯುತ್ತಾರೆ. ಸದರಿ ಗಾಯವು ಒಬ್ಬ ವ್ಯಕ್ತಿಗೆ ಯಾವುದಾದರು ಗಟ್ಟಿಯಾದ ವಸ್ತು

ತಾಕಿದಾಗ ಆಗುತ್ತದೆ ಎಂದರೆ ಸರಿ. ನಾನು ಯಾವುದಾದರು ವ್ಯಕ್ತಿಯನ್ನು ಪರೀಕ್ಷಿಸಿದಾಗ ಅವರ ಮಾಹಿತಿಯ ವಿವರವನ್ನು ರಜಿಸ್ಟರನಲ್ಲಿ ನಮೂದು ಮಾಡುತ್ತೇನೆ ಎಂದರೆ ಸರಿ. ನಾನು ಚಾಸಾ 1, 4 ರಿಂದ 6 ರವರ ಮಾಹಿತಿಯನ್ನು ಸಹ ರಜಿಸ್ಟರನಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿ. ಅದೇ ದಿನ 2 ರಿಂದ 6 ನೇ ಆರೋಪಿತರು ಸಹ ಆಸ್ಪತ್ರೆಗೆ ಬಂದಿದ್ದರು ಎಂದರೆ ನನಗೆ ನೆನಪು ಇಲ್ಲ. ಸಾಕ್ಷಿಗೆ ಈಗ ಆರ್.ಟಿ.ಐ ಅಡಿಯಲ್ಲಿ ಪಡೆದ ಒಟ್ಟು 5 ದಾಖಲೆಗಳನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಡಿ. 1 ರಿಂದ ನಿಡಿ. 5 ಅಂತಾ ಗುರುತಿಸಲಾಯಿತು. ನಾನು ಸದರಿ ವ್ಯಕ್ತಿಗಳು ಸಹ ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದ ಕಾರಣ ಸದರಿ ಅವರ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಿರುತ್ತೇನೆ. ಒಬ್ಬ ವ್ಯಕ್ತಿಯನ್ನು ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಲು ಅಂದಾಜು 5 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿಯು 1 ರಿಂದ 5 ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾನು ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಖೋಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ.ಸಿ. ಆಳಂದ.